**ಆಕಾಶವಾಣಿ, ಬೆಂಗಳೂರು**

**ರಾಷ್ಟ್ರೀಯ ವಾರ್ತೆಗಳು**

24.01.2026 : 7.35AM

********

**ಮುಖ್ಯಾಂಶಗಳು :**

1. ದೇಶಾದ್ಯಂತ ಇಂದು ಹದಿನೆಂಟನೇ ಉದ್ಯೋಗ ಮೇಳ; ೬೧ ಸಾವಿರಕ್ಕೂ ಅಧಿಕ ನೇಮಕಾತಿ ಪತ್ರ ವಿತರಿಸಲಿರುವ ಪ್ರಧಾನಿ ನರೇಂದ್ರ ಮೋದಿ
2. ಲಖನೌನಲ್ಲಿಂದು 'ಉತ್ತರ ಪ್ರದೇಶ ದಿನ' ಆಚರಣೆಯ ಕಾರ್ಯಕ್ರಮದಲ್ಲಿ ಭಾಗಿಯಾಗಲಿರುವ ಕೇಂದ್ರ ಗೃಹ ಸಚಿವ ಅಮಿತ್ ಶಾ
3. ಇದೇ ೨೭ ರಿಂದ ಗೋವಾದಲ್ಲಿ ನಾಲ್ಕನೇ ಆವೃತ್ತಿಯ 'ಭಾರತ ಇಂಧನ ಸಪ್ತಾಹ' ಕಾರ್ಯಕ್ರಮ
4. ಅಂತಾರಾಷ್ಟ್ರೀಯ ಟಿ೨೦ ಕ್ರಿಕೆಟ್ ಸರಣಿಯ ಎರಡನೇ ಪಂದ್ಯದಲ್ಲಿ ನ್ಯೂಜಿಲೆಂಡ್ ವಿರುದ್ಧ ಭಾರತಕ್ಕೆ ೭ ವಿಕೆಟ್‌ಗಳ ಭರ್ಜರಿ ಗೆಲುವು

*************

ದೇಶದ ಯುವಜನತೆಗೆ ಉದ್ಯೋಗಾವಕಾಶಗಳನ್ನು ಕಲ್ಪಿಸುವ ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಯ ಭಾಗವಾಗಿ, ಇಂದು ದೇಶಾದ್ಯಂತ ನಡೆಯಲಿರುವ ೧೮ನೇ ಆವೃತ್ತಿಯ 'ಉದ್ಯೋಗ ಮೇಳ'ದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಸುಮಾರು ೬೧ ಸಾವಿರಕ್ಕೂ ಅಧಿಕ ಯುವಕರಿಗೆ ನೇಮಕಾತಿ ಪತ್ರಗಳನ್ನು ವಿತರಿಸಲಿದ್ದಾರೆ. ವಿಡಿಯೋ ಕಾನ್ಫರೆನ್ಸಿಂಗ್ ಮೂಲಕ ನಡೆಯಲಿರುವ ಈ ಕಾರ್ಯಕ್ರಮದಲ್ಲಿ ಪ್ರಧಾನಿ, ನೂತನವಾಗಿ ನೇಮಕಗೊಂಡ ಅಭ್ಯರ್ಥಿಗಳನ್ನು ಉದ್ದೇಶಿಸಿ ಮಾತನಾಡಲಿದ್ದಾರೆ. ಈ ೧೮ನೇ ಉದ್ಯೋಗ ಮೇಳವನ್ನು ದೇಶಾದ್ಯಂತ ಒಟ್ಟು ೪೫ ಆಯ್ದ ಸ್ಥಳಗಳಲ್ಲಿ ಏಕಕಾಲದಲ್ಲಿ ಆಯೋಜಿಸಲಾಗಿದೆ. ಈ ಬಾರಿ ನೇಮಕಗೊಂಡ ಅಭ್ಯರ್ಥಿಗಳು ಕೇಂದ್ರ ಸರ್ಕಾರದ ವಿವಿಧ ಪ್ರಮುಖ ಸಚಿವಾಲಯಗಳು ಮತ್ತು ಇಲಾಖೆಗಳಲ್ಲಿ ಕರ್ತವ್ಯಕ್ಕೆ ಸೇರಲಿದ್ದಾರೆ. ಇದರಲ್ಲಿ ಗೃಹ ಸಚಿವಾಲಯ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ, ಹಣಕಾಸು ಸೇವೆಗಳ ಇಲಾಖೆ ಹಾಗೂ ಉನ್ನತ ಶಿಕ್ಷಣ ಇಲಾಖೆ

ಸೇರಿದಂತೆ ವಿವಿಧ ಇಲಾಖೆಗಳ ನೇಮಕಾತಿಗಳು ಸೇರಿವೆ. ಉದ್ಯೋಗ ಸೃಷ್ಟಿಗೆ ಆದ್ಯತೆ ನೀಡುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರ ಹಮ್ಮಿಕೊಂಡಿರುವ ಈ ಯೋಜನೆಯು, ಯುವಶಕ್ತಿಯನ್ನು ರಾಷ್ಟ್ರ ನಿರ್ಮಾಣದ ಮುಖ್ಯವಾಹಿನಿಗೆ ತರುವಲ್ಲಿ ಪ್ರಮುಖ ಪಾತ್ರ ವಹಿಸುತ್ತಿದೆ. ಈ ಯೋಜನೆಯು ಆರಂಭವಾದಾಗಿನಿಂದ ಇದುವರೆಗೆ ದೇಶಾದ್ಯಂತ ಸುಮಾರು ೧೧ ಲಕ್ಷಕ್ಕೂ ಅಧಿಕ ಅಭ್ಯರ್ಥಿಗಳಿಗೆ ನೇಮಕಾತಿ ಪತ್ರಗಳನ್ನು ವಿತರಿಸಲಾಗಿದೆ. ಪಾರದರ್ಶಕ ಮತ್ತು ತ್ವರಿತ ನೇಮಕಾತಿ ಪ್ರಕ್ರಿಯೆಯ ಮೂಲಕ ಯುವಜನತೆಗೆ ಸುಸ್ಥಿರ ಜೀವನೋಪಾಯ ಒದಗಿಸುವುದು ಈ ಅಭಿಯಾನದ ಮುಖ್ಯ ಉದ್ದೇಶವಾಗಿದೆ.

*************

ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ, ಬೆಂಗಳೂರಿನ ಬಿಎಸ್ಎಫ್ ಆವರಣದಲ್ಲಿಂದು ನಡೆಯಲಿರುವ ರೋಜ್‌ಗಾರ್ ಮೇಳದಲ್ಲಿ ಭಾಗವಹಿಸಲಿದ್ದು, ಹೊಸದಾಗಿ ನೇಮಕಗೊಂಡ ಸಿಎಪಿಎಫ್ ಸಿಬ್ಬಂದಿಗೆ ನೇಮಕಾತಿ ಪತ್ರಗಳನ್ನು ವಿತರಿಸಲಿದ್ದಾರೆ.ನಂತರ ಅವರು, ಜಾಲಹಳ್ಳಿಯ ಎಚ್‌ಎಂಟಿ ಮೈದಾನದಲ್ಲಿ ನಡೆಯುವ ರಾಷ್ಟ್ರಮಟ್ಟದ ಪ್ರದರ್ಶನವನ್ನು ಉದ್ಘಾಟಿಸಲಿದ್ದಾರೆ ಮತ್ತು ಕುಶಲಕರ್ಮಿಗಳಿಗೆ ಟೂಲ್‌ಕಿಟ್‌ಗಳು ಹಾಗೂ ಯಂತ್ರೋಪಕರಣಗಳನ್ನು ವಿತರಿಸಲಿದ್ದಾರೆ.

*************

ಕೇಂದ್ರ ಗೃಹ ಮತ್ತು ಸಹಕಾರ ಸಚಿವ ಅಮಿತ್ ಶಾ ಇಂದು ಲಖನೌನಲ್ಲಿ ನಡೆಯುವ 'ಉತ್ತರ ಪ್ರದೇಶ ದಿನ' ಆಚರಣೆಯ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಳ್ಳಲಿದ್ದಾರೆ.ಈ ಸಂದರ್ಭದಲ್ಲಿ, ಅವರು, 'ಒಂದು ಜಿಲ್ಲೆ ಒಂದು ತಿನಿಸು' ಯೋಜನೆಯನ್ನು ಉದ್ಘಾಟಿಸಲಿದ್ದಾರೆ. ಈ ಉಪಕ್ರಮದಡಿಯಲ್ಲಿ, ಉತ್ತರ ಪ್ರದೇಶದ ಪ್ರತಿಯೊಂದು ಜಿಲ್ಲೆಯ ವಿಶಿಷ್ಟ ಸಾಂಪ್ರದಾಯಿಕ ತಿನಿಸುಗಳನ್ನು ಗುರುತಿಸಲಾಗುತ್ತದೆ. ಗುಣಮಟ್ಟದ ಸುಧಾರಣೆ, ಬ್ರ್ಯಾಂಡಿಂಗ್ ಮತ್ತು ಮಾರುಕಟ್ಟೆ ಪ್ರವೇಶಕ್ಕೆ ಒತ್ತು ನೀಡಲಾಗುತ್ತದೆ. ಇದರಿಂದಾಗಿ ಸ್ಥಳೀಯ ರುಚಿಗಳು ಪ್ರಾದೇಶಿಕವಾಗಿ ಮಾತ್ರವಲ್ಲದೆ ರಾಷ್ಟ್ರೀಯ ಮತ್ತು ಜಾಗತಿಕ ಮನ್ನಣೆಯನ್ನು ಪಡೆಯುತ್ತವೆ.

*************

ಭಾರತದ ಇಂಧನ ವಲಯದ ಪ್ರಮುಖ ಕಾರ್ಯಕ್ರಮವಾದ 'ಭಾರತ ಇಂಧನ ಸಪ್ತಾಹ'ದ ನಾಲ್ಕನೇ ಆವೃತ್ತಿಯು ಇದೇ ೨೭ ರಿಂದ ೩೦ ರವರೆಗೆ ಗೋವಾದಲ್ಲಿ ಜರುಗಲಿದೆ. ಈ ಅಂತಾರಾಷ್ಟ್ರೀಯ ಇಂಧನ ಸಮ್ಮೇಳನದ ಪೂರ್ವಭಾವಿ ಸುದ್ದಿಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿದ ಕೇಂದ್ರ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವ ಹರ್ದೀಪ್ ಸಿಂಗ್ ಪುರಿ, ಈ ವರ್ಷದ ಮೊದಲ ಪ್ರಮುಖ ಅಂತಾರಾಷ್ಟ್ರೀಯ ಇಂಧನ ವಿದ್ಯಮಾನದಲ್ಲಿ ಸುಮಾರು ೭೫ ಸಾವಿರಕ್ಕೂ ಹೆಚ್ಚು ಪ್ರತಿನಿಧಿಗಳು ಭಾಗವಹಿಸುವ ನಿರೀಕ್ಷೆಯಿದೆ ಎಂದು ತಿಳಿಸಿದರು. ನಾಲ್ಕು ದಿನಗಳ ಕಾಲ ನಡೆಯಲಿರುವ ಈ ಬೃಹತ್ ಕಾರ್ಯಕ್ರಮದಲ್ಲಿ ೧೮೦ ಅಂತಾರಾಷ್ಟ್ರೀಯ ಪ್ರದರ್ಶಕರು ಸೇರಿದಂತೆ ಒಟ್ಟು ೬೦೦ಕ್ಕೂ ಹೆಚ್ಚು ಸಂಸ್ಥೆಗಳು ತಮ್ಮ ನೂತನ ತಂತ್ರಜ್ಞಾನ ಮತ್ತು ಉತ್ಪನ್ನಗಳನ್ನು ಪ್ರದರ್ಶಿಸಲಿವೆ ಎಂದು ಮಾಹಿತಿ ನೀಡಿದರು.

*************

ಸಕ್ರಿಯ ಆಡಳಿತ ಮತ್ತು ಸಕಾಲಿಕ ಅನುಷ್ಠಾನಕ್ಕಾಗಿ ಪ್ರಧಾನಮಂತ್ರಿಗಳ ಪ್ರಮುಖ ವೇದಿಕೆಯಾದ ಪ್ರಗತಿ ತನ್ನ ಸಭೆಗಳನ್ನು ಯಶಸ್ವಿಯಾಗಿ ನಡೆಸುವುದರೊಂದಿಗೆ ಮಹತ್ವದ ಮೈಲಿಗಲ್ಲು ಸಾಧಿಸಿದೆ. ಈ ವಿಶೇಷ ಸರಣಿಯಲ್ಲಿ, ಇಂದು ಛತ್ತೀಸ್‌ಗಢದ ರಾಷ್ಟ್ರೀಯ ಹೆದ್ದಾರಿ ೩೦ರ ರಾಯ್‌ಪುರ-ಕೊಡೆಬೋಡ್ ವಿಭಾಗದ ಚತುಷ್ಪಥದ ಬಗ್ಗೆ ಮಾಹಿತಿ ಇದೀಗ ರಾಷ್ಟ್ರೀಯ ಹೆದ್ದಾರಿ ೩೦ರ ೪೩ ಕಿಲೋ ಮೀಟರ್ ಉದ್ದದ ರಾಯ್‌ಪುರ-ಕೊಡೆಬೋಡ್ ವಿಭಾಗದ ನಾಲ್ಕು ಪಥದ ರಸ್ತೆ ನಿರ್ಮಾಣವು ಮಧ್ಯ ಛತ್ತೀಸ್‌ಗಢದ ಹೆದ್ದಾರಿ ಆಧುನೀಕರಣದಲ್ಲಿ ಒಂದು ಪ್ರಮುಖ ಹೆಜ್ಜೆಯಾಗಿದೆ. ಈ ಯೋಜನೆಯನ್ನು ರಾಷ್ಟ್ರೀಯ ಹೆದ್ದಾರಿ ಅಭಿವೃದ್ಧಿ ಕಾರ್ಯಕ್ರಮದ ಅಡಿಯಲ್ಲಿ ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಜಾರಿಗೆ ತಂದಿತು. ಈ ಯೋಜನೆಯನ್ನು ಸೆಪ್ಟೆಂಬರ್ ೨೦೧೬ರಲ್ಲಿ ೯೮೭ ಕೋಟಿ ಎಂಬತ್ತೆಂಟು ಲಕ್ಷ ರೂಪಾಯಿಗಳ ಅನುಮೋದಿತ ವೆಚ್ಚದಲ್ಲಿ ಮಂಜೂರು ಮಾಡಲಾಯಿತು. ಕಾರ್ಯಗತಗೊಳಿಸುವಾಗ, ಯೋಜನೆಯು ವಸ್ತು ಪೂರೈಕೆ ನಿರ್ಬಂಧಗಳು ಮತ್ತು ಅಂತರ-ಸಚಿವಾಲಯಗಳ ಸಮನ್ವಯ ಸವಾಲುಗಳ ಸಂಯೋಜನೆಯನ್ನು ಎದುರಿಸಿತು, ಇದು ನಿರ್ಮಾಣ ಅನುಕ್ರಮದ ಮೇಲೆ ಪರಿಣಾಮ ಬೀರಿತು. ನಂತರ ಭೂಮಿಯನ್ನ DRDO ಭೂಮಿ ಎಂದು ಗುರುತಿಸಲಾಯಿತು, ಇದಕ್ಕೆ ಔಪಚಾರಿಕ ವರ್ಗಾವಣೆ ಮತ್ತು ರಕ್ಷಣಾ ಸಚಿವಾಲಯದ ಚೌಕಟ್ಟಿನ ಅಡಿಯಲ್ಲಿ ಕಾರ್ಯನಿರ್ವಹಿಸಲು ಅನುಮತಿ ಅಗತ್ಯವಿತ್ತು. ಫೆಬ್ರವರಿ

೨೦೨೩ ರಲ್ಲಿ ಪ್ರಗತಿಯ ಅಡಿಯಲ್ಲಿ ಯೋಜನೆಯನ್ನು ಪರಿಶೀಲಿಸಲಾಯಿತು, ಇದು ಬಾಕಿ ಇರುವ ಭೂಮಿ ಮತ್ತು ವಸ್ತು ಪೂರೈಕೆ ಸಮಸ್ಯೆಗಳತ್ತ ಗಮನ ಹರಿಸಿತು.

*************

ಪ್ರಗತಿ ಪರಿಶೀಲನೆಯ ನಂತರ, ಪಿಎಂಜಿ ಮತ್ತು ರಾಜ್ಯ ಮಟ್ಟದ ನಿರಂತರ ಅನುಸರಣಾ ಪರಿಶೀಲನೆಗಳು ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳು, ವಿದ್ಯುತ್, ರಕ್ಷಣಾ ಸಚಿವಾಲಯ, ಎನ್‌ಟಿಪಿಸಿ, ಡಿಆರ್‌ಡಿಒ ಹಾಗೂ ರಾಜ್ಯ ಸರ್ಕಾರದ ನಡುವೆ ಸಂಘಟಿತ ಕ್ರಮವನ್ನು ಸಕ್ರಿಯಗೊಳಿಸಿದವು. ಯೋಜನೆಯು ೧೦೦ ಪ್ರತಿಶತ ಭೌತಿಕ ಪ್ರಗತಿಯನ್ನು ಸಾಧಿಸಿತು ಮತ್ತು ೨೦೨೩ರ ಜೂನ್ ೨೦ ರಂದು ಕಾರ್ಯಾರಂಭ ಮಾಡಿತು. ಉಳಿದಿರುವ ಭೂಮಿ ಮತ್ತು ವಸ್ತು-ಪೂರೈಕೆ ಸಮಸ್ಯೆಗಳನ್ನು ಪರಿಹರಿಸುವಲ್ಲಿ ಪ್ರಗತಿ ನಿರ್ಣಾಯಕ ಪಾತ್ರ ವಹಿಸಿತು, ಸಾಂಸ್ಥಿಕ ಜವಾಬ್ದಾರಿಗಳು ಸಕಾಲಿಕ ಪೂರ್ಣಗೊಳಿಸುವಿಕೆಯತ್ತ ಒಮ್ಮುಖವಾಗುವುದನ್ನು ಖಚಿತಪಡಿಸಿತು.

*************

೨೦೨೬ನೇ ಸಾಲಿನ ಕಸ್ಟಮ್ಸ್ ಬ್ರೋಕರ್‌ಗಳ ಪರವಾನಗಿ ಪರೀಕ್ಷೆ, ಬರುವ ಮಾರ್ಚ್ ೧೬ ರಂದು ನಡೆಯಲಿದೆ ಎಂದು ಕೇಂದ್ರ ಹಣಕಾಸು ಸಚಿವಾಲಯ ತಿಳಿಸಿದೆ. ಈ ಕುರಿತು ಅಧಿಕೃತ ಪ್ರಕಟಣೆ ಹೊರಡಿಸಿರುವ ಸಚಿವಾಲಯ, ಈ ಬಾರಿಯ ಪರೀಕ್ಷೆಯನ್ನು ಗಣಕಯಂತ್ರ ಆಧಾರಿತ ಪರೀಕ್ಷೆ-ಸಿಬಿಟಿ ಮೂಲಕ ನಡೆಸಲಾಗುತ್ತಿದ್ದು, ಅಭ್ಯರ್ಥಿಗಳ ಅನುಕೂಲಕ್ಕಾಗಿ ಇಂಗ್ಲೀಷ್ ಮತ್ತು ಹಿಂದಿ ಭಾಷೆಗಳಲ್ಲಿ ಬಹು ಆಯ್ಕೆ ಪ್ರಶ್ನೆಗಳನ್ನು ನೀಡಲಾಗುವುದು ಎಂದು ತಿಳಿಸಿದೆ. ಪರೀಕ್ಷೆ ಒಟ್ಟು ೧೫೦ ಪ್ರಶ್ನೆಗಳನ್ನು ಒಳಗೊಂಡಿರಲಿದ್ದು, ಪ್ರತಿ ಸರಿಯಾದ ಉತ್ತರಕ್ಕೆ ಮೂರು ಅಂಕಗಳನ್ನು ನಿಗದಿಪಡಿಸಲಾಗಿದೆ. ಪ್ರತಿ ತಪ್ಪು ಉತ್ತರಕ್ಕೆ ೧ ಅಂಕ ಕಡಿತಗೊಳಿಸುವ ಋಣಾತ್ಮಕ ಮೌಲ್ಯ ಮಾಪನ ಪದ್ಧತಿಯನ್ನು ಅನುಸರಿಸಲಾಗುತ್ತದೆ. ಪರೀಕ್ಷೆಯಲ್ಲಿ ಕನಿಷ್ಠ ಶೇಕಡಾ ೬೦ ರಷ್ಟು ಅಂದರೆ, ೪೫೦ ಅಂಕಗಳಲ್ಲಿ ಕನಿಷ್ಠ ೨೭೦ ಅಂಕಗಳನ್ನು ಗಳಿಸುವವರು ಮುಂದಿನ ಹಂತಕ್ಕೆ ಅರ್ಹತೆ ಪಡೆಯಲಿದ್ದಾರೆ. ಪರೀಕ್ಷಾ ಅವಧಿಯನ್ನು ಎರಡೂವರೆ ಗಂಟೆಗೆ ನಿಗದಿಪಡಿಸಲಾಗಿದ್ದು, ಬೆಳಗ್ಗೆ ೧೦.೩೦ ರಿಂದ ಮಧ್ಯಾಹ್ನ ೧ ಗಂಟೆಯವರೆಗೆ ನಡೆಯಲಿದೆ.

*************

ನವದೆಹಲಿಯಲ್ಲಿ ಆಯೋಜಿಸಲಾಗಿದ್ದ ಪ್ರಜಾಪ್ರಭುತ್ವ ಮತ್ತು ಚುನಾವಣಾ ನಿರ್ವಹಣೆ ಕುರಿತ ಭಾರತೀಯ ಅಂತಾರಾಷ್ಟ್ರೀಯ ಸಮ್ಮೇಳನ-ಐಐಸಿಡಿಇಎಂ ಸಂಪನ್ನಗೊಂಡಿದೆ. ಮೂರು ದಿನಗಳ ಕಾರ್ಯಕ್ರಮದಲ್ಲಿ ಯುಕೆ, ಅಮೆರಿಕ, ದಕ್ಷಿಣ ಆಫ್ರಿಕ, ಮಾಲ್ಡೀವ್ಸ್, ಬಾಟ್ಸ್ವಾನಾ, ಫಿಜಿ ಮತ್ತು ಝೆಕ್ ರಿಪಬ್ಲಿಕ್ ಸೇರಿದಂತೆ ಹಲವು ರಾಷ್ಟ್ರಗಳ ನೂರಕ್ಕೂ ಅಧಿಕ ಅಂತಾರಾಷ್ಟ್ರೀಯ ಪ್ರತಿನಿಧಿಗಳು ಪಾಲ್ಗೊಂಡರು.ನವದೆಹಲಿಯಲ್ಲಿ ನಡೆದ ಸಮ್ಮೇಳನದ ಸಮಾರೋಪ ಅಧಿವೇಶನವನ್ನುದ್ದೇಶಿಸಿ ಮಾತನಾಡಿದ ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್, ಕಾನೂನಿನ ಚೌಕಟ್ಟಿನ ಒಳಗಿರುವ ಎಲ್ಲಾ ಅರ್ಹ ಮತದಾರರ ಹೆಸರನ್ನು ಒಳಗೊಂಡಿರುವ ಶುದ್ಧ ಮತದಾರರ ಪಟ್ಟಿಯು ಪ್ರಜಾಪ್ರಭುತ್ವದ ಅಡಿಪಾಯವಾಗಿದೆ ಎಂದು ಹೇಳಿದ್ದಾರೆ.

*************

ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ರಾಷ್ಟ್ರಪತಿ ಭವನದಲ್ಲಿ ಗ್ರಂಥ ಕುಟೀರವನ್ನು ಉದ್ಘಾಟಿಸಿದ್ದಾರೆ. ಕುಟೀರವು ೧೧ ಭಾರತೀಯ ಶಾಸ್ತ್ರೀಯ ಭಾಷೆಗಳಲ್ಲಿ ಸುಮಾರು ೫೦ ಹಸ್ತಪ್ರತಿಗಳು ಮತ್ತು ೨ ಸಾವಿರದ ೩೦೦ ಪುಸ್ತಕಗಳ ಸಂಗ್ರಹವನ್ನು ಹೊಂದಿದೆ. ಈ ಸಂಗ್ರಹವು ಮಹಾಕಾವ್ಯಗಳು, ತತ್ವಶಾಸ್ತ್ರ, ಭಾಷಾಶಾಸ್ತ್ರ, ಇತಿಹಾಸ, ಆಡಳಿತ, ವಿಜ್ಞಾನ ಮತ್ತು ಭಕ್ತಿ ಸಾಹಿತ್ಯ ಹಾಗೂ ಭಾರತದ ಸಂವಿಧಾನದಂತಹ ವ್ಯಾಪಕ ಶ್ರೇಣಿಯ ವಿಷಯಗಳನ್ನು ಒಳಗೊಂಡಿದೆ.

*************

ಚತ್ತೀಸ್‌ಗಢದ ನವ ರಾಯ್‌ಪುರದಲ್ಲಿರುವ ಶಹೀದ್ ವೀರ್ ನಾರಾಯಣ್ ಸಿಂಗ್ ಅಂತಾರಾಷ್ಟ್ರೀಯ ಕ್ರಿಕೆಟ್ ಕ್ರೀಡಾಂಗಣದಲ್ಲಿ ನಿನ್ನೆ ರಾತ್ರಿ ನಡೆದ ಅಂತಾರಾಷ್ಟ್ರೀಯ ಟಿ೨೦ ಕ್ರಿಕೆಟ್ ಸರಣಿಯ ಎರಡನೇ ಪಂದ್ಯದಲ್ಲಿ ನ್ಯೂಜಿಲೆಂಡ್ ವಿರುದ್ಧ ಭಾರತ ೭ ವಿಕೆಟ್‌ಗಳ ಭರ್ಜರಿ ಗೆಲುವು ದಾಖಲಿಸಿದೆ. ಮೊದಲು ಬ್ಯಾಟಿಂಗ್ ಮಾಡಿದ ನ್ಯೂಜಿಲೆಂಡ್ ತಂಡ ನಿಗದಿತ ೨೦ ಓವರ್‌ಗಳಲ್ಲಿ ೬ ವಿಕೆಟ್ ನಷ್ಟಕ್ಕೆ ೨೦೮ರನ್ ಗಳನ್ನು ಕಲೆಹಾಕಿತು. ಈ ಗುರಿಯನ್ನು ಬೆನ್ನತ್ತಿದ ಭಾರತ ತಂಡ ೩ ವಿಕೆಟ್ ನಷ್ಟಕ್ಕೆ ೨೮ ಬಾಲ್‌ಗಳು ಇರುವಂತೆಯೇ ೨೦೯ ರನ್‌ಗಳಿಸಿ ಗೆಲುವಿನ ನಗೆ ಬೀರಿತು. ಸೂರ್ಯಕುಮಾರ್ ಯಾದವ್ ೩೭ ಬಾಲ್‌ಗಳಿಗೆ ೮೨ ರನ್‌ಗಳಿಸಿದರು. ಇಶಾನ್ ಕಿಶನ್ ೩೨

ಬಾಲ್‌ಗಳಿಗೆ ೭೬ ರನ್, ಶಿವಮ್ ದುಬೆ ೧೮ ಬಾಲ್‌ಗಳಿಗೆ ೩೬ ರನ್‌ಗಳಿಸಿ ತಂಡದ ಗೆಲುವಿಗೆ ಕೊಡುಗೆ ನೀಡಿದರು. ಈ ಸರಣಿಯ ಮೂರನೇ ಪಂದ್ಯ ನಾಳೆ ಗುವಾಹತಿಯಲ್ಲಿ ನಡೆಯಲಿದೆ.